**R.A: 24/2021**
**P.W-1**

**<u>ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಕೂಡ್ಲಿಗಿ</u>**

ದಿನಾಂಕಃ 05.06.2025 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**<u>ಪಾಟೀ ಸವಾಲು ಎದುರುದಾರ ನಂಃ 9, 10, 13 ರವರ ಪರ ವಕೀಲರಿಂದ</u>**

ನಾವು ಮತ್ತು ಎದುರುದಾರರು ಮೂಲತಃ ಉಜ್ಜಿನಿ ಗ್ರಾಮದವರು ಎಂದರೆ ಸರಿ. 1 ನೇ ಎದುರುದಾರರು 2 ರಿಂದ 14 ನೇ ಎದುರುದಾರರ ವಿರುದ್ಧ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಕೂಡ್ಲಿಗಿಯಲ್ಲಿ ಓ.ಎಸ್ ನಂಃ 107/2002 ರಂತೆ ದಾವೆ ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. ಸದರಿ ದಾವೆಯ ಡಿಕ್ರಿ ಆಧಾರದ ಮೇಲೆ 1 ನೇ ಎದುರುದಾರರು ಅದೇ ನ್ಯಾಯಾಲಯದಲ್ಲಿ ಎಫ್.ಡಿ.ಪಿ ನಂಃ 05/2012 ರಲ್ಲಿ ಅರ್ಜಿ ಸಲ್ಲಿಸಿದ್ದಾರೆ ಎಂದರೆ ಗೊತ್ತಿಲ್ಲ. ಸಿವಿಲ್ ನ್ಯಾಯಾಲಯದ ಡಿಕ್ರಿಯ ಮೇಲೆ ಅಪೀಲು ಬಂದಿರುತ್ತೇನೆ ಆದರೆ ಅದರ ನಂಬರ್ ನನಗೆ ಗೊತ್ತಿರುವುದಿಲ್ಲ. ಸಿವಿಲ್ ನ್ಯಾಯಾಲಯದಲ್ಲಿ ಸಲ್ಲಿಸಲಾಗಿದ್ದ ದಾವೆಯಲ್ಲಿ ನಾನು ಮತ್ತು ಉಳಿದ ಮೇಲ್ಮನವಿದಾರರು ಪಕ್ಷಗಾರರಾಗಿ ಇರಲಿಲ್ಲ ಎಂದರೆ ಸರಿ. ಸದರಿ ನ್ಯಾಯಾಲಯದಲ್ಲಿ ತೀರ್ಪು ಯಾರ ಪರವಾಗಿ ಬಂದಿದೆ ಎಂಬುದರ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ಸದರಿ ದಾವೆಯಲ್ಲಿ ಎದುರುದಾರರ ಕುಟುಂಬದ ಆಸ್ತಿಗಳಿಗೆ ಸಂಬಂಧಿಸಿದಂತೆ ಭಾಗಾಂಶದ ಡಿಕ್ರಿಯನ್ನು ಮಾಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಈ ಮೇಲ್ಮನವಿ ದಾವೆಯನ್ನು ಯಾವ ಕಾರಣಕ್ಕಾಗಿ ಸಲ್ಲಿಸಿದ್ದಿರಿ ಎಂದರೆ ನಮಗೆ ಸೇರಿದ ಆಸ್ತಿಯನ್ನು ಅಸಲು ದಾವೆಯಲ್ಲಿ ಸೇರಿಸಿ ಡಿಕ್ರಿ ಆದೇಶವನ್ನು ಪಡೆದಿರುವುದರಿಂದ ಈ ಮೇಲ್ಮನವಿಯನ್ನು ಸಲ್ಲಿಸಿರುತ್ತೇನೆ. ನಮಗೆ ಸೇರಿದ ಆಸ್ತಿಯ ಸರ್ವೆ ನಂಃ 769 ಎ/1, ಅದರ ವಿಸ್ತೀರ್ಣ 6 ಎಕರೆ 63 ಸೆಂಟ್ಸ್ ಆಗಿರುತ್ತದೆ. ಸದರಿ ನಮ್ಮ ಆಸ್ತಿಯನ್ನು ಅಳತೆ ಮಾಡಲು ನ್ಯಾಯಾಲಯದಿಂದ ಕಮಿಷನರ್ ಬಂದಾಗ ನಮಗೆ ನಮ್ಮ ಆಸ್ತಿಯನ್ನು ಸಹ ಸೇರಿಸಿಕೊಂಡು ಡಿಕ್ರಿ ಪಡೆದಿರುವ ಬಗ್ಗೆ ಗೊತ್ತಾಗಿರುತ್ತದೆ. ಈ ಬಗ್ಗೆ ನನಗೆ ಮೊದಲೇ ಮಾಹಿತಿ ಇತ್ತು ಎಂದರೆ ಸರಿಯಲ್ಲ. ಆದರೂ ಸಹ 1 ನೇ ಎದುರುದಾರರ ಮಾತು ಕೇಳಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸರ್ವೆ ನಂಃ 769 ಎ/1, ಅದರ ವಿಸ್ತೀರ್ಣ 3 ಎಕರೆ 63 ಸೆಂಟ್ಸ್ ಇದ್ದು ಅದರಲ್ಲಿ ಎದುರುದಾರರಿಗೆ ಸೇರಿದ ಆಸ್ತಿ 3 ಎಕರೆ 38 ಸೆಂಟ್ಸ್ ಇರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂಃ 769 ಎ/1 ರಲ್ಲಿ 2 ಎಕರೆಗೆ ಸಂಬಂಧಿಸಿದಂತೆ ಪಹಣಿ, ಕಂದಾಯ ರಸೀದಿ, ಇ.ಸಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸದರಿ ಆಸ್ತಿ ನನ್ನ ಅಜ್ಜ ತೂಲಹಳ್ಳಿ ಶೇಕ್ ಸಾಬ್ ರವರಿಗೆ ಸೇರಿದ ಆಸ್ತಿ ಆಗಿದ್ದು ಅವರಿಂದ ನಮಗೆ ಬಂದಿರುತ್ತದೆ. ಸದರಿ ಆಸ್ತಿಯ ಚೆಕ್ಕುಬಂದಿಯನ್ನು ನಾನು

ಹೇಳಬಲ್ಲೆ. ಪೂರ್ವಕ್ಕೆ ಬೇರೆಯವರ ಕಣ, ಪಶ್ಚಿಮಕ್ಕೆ ದಾರಿ, ಉತ್ತರಕ್ಕೆ ಖಾಸಗಿ ಜಮೀನು ಮತ್ತು ದಕ್ಷಿಣಕ್ಕೆ ರಸ್ತೆ ಇರುತ್ತದೆ. ಉತ್ತರಕ್ಕೆ ಇರುವ ಖಾಸಗಿ ಜಮೀನು ಮತ್ತು ಪೂರ್ವಕ್ಕೆ ಇರುವ ಕಣದ ಸರ್ವೆ ನಂಬರ್ ಗಳು ನನಗೆ ಗೊತ್ತಿಲ್ಲ. ಸದರಿ ಜಮೀನಿನಲ್ಲಿ ನಾವು ಸ್ವಾಧೀನಾನುಭವದಲ್ಲಿ ಇದ್ದೆವೆಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಾವು ಸದರಿ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ 10 ರ ಆಸ್ತಿಯು ನಮ್ಮ ಕುಟುಂಬಕ್ಕೆ ಸೇರಿದ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ನನ್ನ ತಾತ ಸದರಿ ಆಸ್ತಿಯಲ್ಲಿ 1 ಎಕರೆ ಕಣ ಮತ್ತು 1 ಎಕರೆ ಜಮೀನು ಉಳುವೆ ಮಾಡುತ್ತಿದ್ದರೆಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ಎದುರುದಾರರು ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಕೂಡ್ಲಿಗಿಯಲ್ಲಿ ಓ.ಎಸ್ ನಂಃ 107/2002 ರ ದಾವೆಯಲ್ಲಿ ಸರ್ವೆ ನಂಃ 769 ಎ/1 ನ್ನು ಸೇರ್ಪಡೆ ಮಾಡಿದ ಕಾಲಕ್ಕೆ ನನಗೆ ತಿಳುವಳಿಕೆ ಇತ್ತು ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನೀಡಲಾದ ತೀರ್ಪು ನನಗೆ ಬಂಧನಕಾರಿಯಾಗುವುದಿಲ್ಲ ಎಂದರೆ ಸರಿಯಲ್ಲ. ಮೆಲ್ಕಂಡ ಆಸ್ತಿಯನ್ನು ಹೊರುತುಪಡಿಸಿ ನನಗೆ ಬಂಧನಕಾರಿಯಾಗುವುದಿಲ್ಲ. ಹಾಗಾಗಿ ಈ ಮೇಲ್ಮನವಿ ಸಲ್ಲಿಸಲು ನನಗೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಿಃ 16.09.2021 ರಂದು ನ್ಯಾಯಾಲಯದ ನಿಯೋಗಿ ಆಸ್ತಿ ಕೋರ್ಟ್ ಕಮಿಷನರ್ ಆಗಿ ಸರ್ವೇಯರ್ ರವರು ಬಂದಿದ್ದರು ಆಗ ನನಗೆ ಅಸಲು ದಾವೆಯಲ್ಲಿ ಡಿಕ್ರಿ ಆಗಿರುವುದರ ಬಗ್ಗೆ ಗೊತ್ತಾಗಿರುತ್ತದೆ. ಆ ಸಮಯದಲ್ಲಿ ಸರ್ವೇಯರ್ ರವರು ನಮಗೆ ನೋಟೀಸ್ ನೀಡಿರುವುದಿಲ್ಲ.

ಮರು ವಿಚಾರಣೆ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

**ಓ,ಹೇ,ಕೇ,ಸರಿ ಇದೆ.**

**ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ಕೂಡ್ಲಿಗಿ.**